

ಎಡಕ್ಕೆ ಬಲಕ್ಕೆ ತಿರುಗುತ್ತಾ ಕರೆದೊಯ್ದು ಒಂದು ಮನೆ ಗೇಟು ತೆರೆದು ಮೊದಲ ಮಹಡಿಗೆ ಕರೆದೊಯ್ದಳು. ಹಾಲು, ಒಂದು ರೂಮು, ಅಡಿಗೆಮನೆಯಿತ್ತು. 'ಮಲ್ಲೇಶ್ವರ ಒಳ್ಳೆ ಏರಿಯಾ. ಕೆಳಗೆ ಓನರು ಜಾನಕಮ್ಮ ಇರ್ತಾರೆ. ಅವರಲ್ಲೆ ಊಟ, ತಿಂಡಿ ಎಲ್ಲಾ ಆಗುತ್ತೆ. ಒಂಥರಾ ಪೀಜಿನೇ; ಆದರೆ, ಈ ಮನೆ ಬಾಡಿಗೆ ಲೆಕ್ಕದಲ್ಲಿದೆ. ನಾವಿಬ್ರು ಹಂಚಕೋಬೇಕು. ಎರಡು ಊಟ, ತಿಂಡಿ, ಬಾಡಿಗೆ ಸೇರಿ ಒಬ್ರಿಗೆ ತಿಂಗಳಿಗೆ ಎಂಟುಸಾವಿರ ಬರುತ್ತೆ. ಬಾ, ಓನರ್ ಪರಿಚಯ ಮಾಡಿಸ್ತೀನಿ. ಅಂದಹಾಗೆ, ಯಾವುದಾದ್ರು ಐಡೆಂಟಿಟಿ ಕಾರ್ಡಿದೆಯ... ಅದು ಫಾರ್ಮಾಲಿಟಿಗೆ ಕೇಳತಾರೆ.' ಪರ್ಸಿನಲ್ಲಿದ್ದ, ಆರುತಿಂಗಳ ಹಿಂದೆ ಮಾಡಿಸಿದ್ದ ವೋಟರ್ ಐಡಿ ತೆಗೆದು ಕೊಟ್ಟಳು. 'ನೋಡಿದ್ರ... ಸುರಭಿ ಬರೆಯೋಕೆ ಸುಬ್ಬಿ ಅಂತ ಬರೆದುಬಿಟ್ಟಿದಾರೆ. ಈ ಸರಕಾರಿ ಏಜೆನ್ಸಿಗಳೆಲ್ಲ